RNU AIR DHARWAD

# OCTOBER 19, 2025
# AKASHAVANI - DHARWAD
# PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

<><><>

- ಆದಿ ಕರ್ಮಯೋಗಿ; ಧರ್ತಿ ಆಭಾ, ಗ್ರಾಮ ಉತ್ಕರ್ಷ ಅಭಿಯಾನ; ರಾಜ್ಯಕ್ಕೆ ಆರು ರಾಷ್ಟ್ರೀಯ ಪುರಸ್ಕಾರಗಳ, ಗರಿ.
- ಉತ್ತರ ಕರ್ನಾಟಕದ, ಸಕ್ಕರೆ ಕಾರ್ಖಾನೆಗಳಲ್ಲಿ, ಕಬ್ಬು ಅರೆಯುವ ಕಾರ್ಯಕ್ಕೆ, ನಾಳೆ ಚಾಲನೆ.
- ಗ್ರಾಮ ಪಂಚಾಯಿತಿಯಿಂದ, ಇ–ಸ್ವತ್ತು ವಿತರಣೆಗೆ, ಗ್ರಾಮೀಣಾಭಿವೃದ್ಧಿ ಇಲಾಖೆ, ಕ್ರಮ.
- 'ಜಿ.ಎಸ್.ಟಿ. ಬಚತ್ ಉತ್ಸವ್'; 2ನೇ ಆವೃತ್ತಿ ತೆರಿಗೆ ಪರಿಷ್ಕರಣೆ, ದೀಪಾವಳಿ ಮೆರಗು ಹೆಚ್ಚಿಸಿದೆ – ಕೇಂದ್ರ ಸರ್ಕಾರ.

<><><>

ಈಗ ವಾರ್ತೆಗಳ ವಿವರ

<><><>

ಆದಿ ಕರ್ಮಯೋಗಿ ಅಭಿಯಾನ ಹಾಗೂ ಧರ್ತಿ ಆಭಾ ಜನ್ ಜಾತೀಯ ಗ್ರಾಮ ಉತ್ಕರ್ಷ ಅಭಿಯಾನವನ್ನು, ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಹಿನ್ನೆಲೆ, ರಾಜ್ಯಕ್ಕೆ 6 ರಾಷ್ಟ್ರೀಯ ಪುರಸ್ಕಾರಗಳು ಲಭಿಸಿವೆ. ರಾಷ್ಟ್ರಪತಿ ದ್ರೌಪದಿ ಮುರ್ಮು, ಪುರಸ್ಕಾರಗಳನ್ನು ಪ್ರದಾನ ಮಾಡಿ, ಗೌರವಿಸಿದರು ಎಂದು, ಗ್ರಾಮೀಣಾಭಿವೃದ್ಧಿ ಇಲಾಖೆ ಕಾರ್ಯದರ್ಶಿ, ಡಿ.ರಂದೀಪ ತಿಳಿಸಿದ್ದಾರೆ. ಚಿಕ್ಕಬಳ್ಳಾಪುರ, ಬೀದರ, ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳಿಗೆ, ಆದಿ ಕರ್ಮಯೋಗಿ ಅಭಿಯಾನ ಪುರಸ್ಕಾರ, ಧರ್ತಿ ಆಭಾಜನ್ ಜಾತೀಯ ಗ್ರಾಮ ಉತ್ಕರ್ಷ ಅಭಿಯಾನವನ್ನು, ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಚಿಕ್ಕಬಳ್ಳಾಪುರ ಜಿಲ್ಲೆ ರಾಷ್ಟ್ರೀಯ ಪುರಸ್ಕಾರಕ್ಕೆ ಭಾಜನವಾಗಿದೆ, ಎಂದರು.

<><><>

ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ, ಸಂಶೋಧನಾಧಿಕಾರಿ ರಾಜಶೇಖರ, ರಾಜ್ಯ ಮಟ್ಟದ, ಮಾಸ್ಟರ್ ಟ್ರೇನರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ, ಎಕ್ಸ್ ಮಾಧ್ಯಮದಲ್ಲಿ, ಜಿಲ್ಲಾಡಳಿತದ ಅಧಿಕಾರಿಗಳನ್ನು ಅಭಿನಂದಿಸಿದ್ದಾರೆ.

<><><>

ಉತ್ತರ ಕರ್ನಾಟಕ ಭಾಗದ, ಸಕ್ಕರೆ ಕಾರ್ಖಾನೆಗಳು, ನಾಳೆಯಿಂದಲೇ ಕಬ್ಬು ನುರಿಸಲುಆರಂಭಿಸಲಿವೆ ಎಂದು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಖಾತೆ ಸಚಿವ, ಶಿವಾನಂದ ಪಾಟೀಲ, ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಈ ವಿಷಯ ತಿಳಿಸಿದ ಸಚಿವರು, ಈ ಮೊದಲು, ಮಂಡ್ಯ,

ಮೈಸೂರು, ಹಾಸನ, ಚಾಮರಾಜನಗರ ಜಿಲ್ಲೆಗಳಲ್ಲಿ ಜೂನ್ 22 ರಿಂದ ಹಾಗೂ ಬೆಳಗಾವಿ, ವಿಜಯಪುರ, ಬೀದರ, ಕಲಬುರಗಿ, ಬಾಗಲಕೋಟೆ, ಗದಗ, ಯಾದಗಿರಿ, ದಾವಣಗೆರೆ, ಉತ್ತರಕನ್ನಡ, ಬಳ್ಳಾರಿ, ವಿಜಯನಗರ ಹಾಗೂ ಹಾವೇರಿ ಜಿಲ್ಲೆಗಳಲ್ಲಿ, ಬರುವ ನವೆಂಬರ್ 1 ರಿಂದ, ಕಬ್ಬು ನುರಿಸಲು ನಿರ್ಧರಿಸಲಾಗಿತ್ತು, ಎಂದರು.

<><><>

ಕರ್ನಾಟಕ, ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿ ನಿಯಮ, 1993ರ ತಿದ್ದುಪಡಿ ಅನ್ವಯ, ಗ್ರಾಮ ಪಂಚಾಯಿತಿಯಿಂದ, ಆಸ್ತಿಗಳಿಗೆ ಇ–ಸ್ವತ್ತು ವಿತರಿಸಲಾಗುವುದು ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ. ನಿರಾಕ್ಷೇಪಣ N.O.C. ಪರವಾನಗಿ, ತೆರಿಗೆಗಳು, ಶುಲ್ಕ ಹಾಗೂ ದರಗಳನ್ನು ವೈಜ್ಞಾನಿಕವಾಗಿ ನಿಗದಿ ಮಾಡಿದ್ದು, ರಾಜ್ಯದ 95 ಲಕ್ಷ 75 ಸಾವಿರದ 9 ನೂರಾ 35 ಆಸ್ತಿಗಳಿಗೆ, ಇ–ಸ್ವತ್ತು ಪ್ರಮಾಣ ಪತ್ರ ನೀಡಲು ಅವಕಾಶ ಕಲ್ಪಿಸಲಾಗುತ್ತಿದೆ. ನಿಯಮಗಳಂತೆ, ಹದಿನೈದು ದಿನಗಳೊಳಗಾಗಿ, ತಂತ್ರಾಂಶದಲ್ಲಿ ತಾಂತ್ರಿಕ ಬದಲಾವಣೆಗಳನ್ನು ತಂದು, ಗ್ರಾಮೀಣ ಜನರಿಗೆ ಸೌಲಭ್ಯವನ್ನು ಒದಗಿಸಲಾಗುವುದು ಎಂದು, ಸಾಮಾಜಿಕ ಮಾಧ್ಯಮ, ಫೇಸ್‌ಬುಕ್‌ನಲ್ಲಿ ಸಚಿವರು ಪ್ರಕಟಿಸಿದ್ದಾರೆ. ನೂತನ ನಿಯಮಗಳ ಪ್ರಕಾರ, ತೆರಿಗೆ ಲೆಕ್ಕಾಚಾರ ಪ್ರಕ್ರಿಯೆ ಸಹ ಸರಳಗೊಳಿಸಿದ್ದು, ಇ–ಸ್ವತ್ತು ನಮೂನೆ ವಿತರಿಸಲು, ಮೊದಲಿದ್ದ 45 ದಿನಗಳ ಕಾಲಾವಧಿಯನ್ನು, 15 ದಿನಗಳಿಗೆ ಕಡಿತಗೊಳಿಸಲಾಗಿದೆ. ಅಧಿಕಾರಿಗಳು ಅನುಮೋದನೆ ನೀಡದಿದ್ದಲ್ಲಿ, ಸ್ವಯಂಚಾಲಿತ ಅನುಮೋದನೆಗೆ ಅವಕಾಶ ಕಲ್ಪಿಸಲಾಗಿದೆ, ಎಂದಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ವಿವಿಧೆಡೆ, ದಾಂಡೇಲಿಯ ಕಾಳಿ ಹುಲಿ ಸಂರಕ್ಷಿತಅಭಿಯಾರಣ್ಯ ಹಾಗೂ ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕಿನ, ತಾಳಗುಪ್ಪ ಬಳಿ, ಸಸ್ಯ ಶಾಸ್ತ್ರಜ್ಞರು ಸಂಗ್ರಹಿಸಿದ, ಅಪರೂಪದ ನಾಲ್ಕು ಸಸ್ಯ ತಳಿಗಳು, ವಿಜ್ಞಾನಕ್ಕೆ ಹೊಸ ಸೇರ್ಪಡೆಯಾಗಿವೆ. ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ, ಸಸ್ಯಶಾಸ್ತ್ರ ಸ್ನಾತಕ ಅಧ್ಯಯನ ವಿಭಾಗದ ಪ್ರಾಧ್ಯಾಪಕ, ಕೆ.ಕೋಟ್ರೇಶ, ವಿದ್ಯಾರ್ಥಿಗಳಾದ ಶ್ರೇಯಸ್ ಬೆಟಗೇರಿ, ವನಜಾ ಪಟಗಾರ ಹಾಗೂ ಮಂಜುಶ್ರೀ ಕನೋಜ ತಂಡ, ನಾಲ್ಕು ಪ್ರಭೇದಗಳ ವಿಶಿಷ್ಟ ಸಸ್ಯಗಳನ್ನು ಪತ್ತೆ ಮಾಡಿ, ಅಂತಾರಾಷ್ಟ್ರೀಯ ವೈಜ್ಞಾನಿಕ ಸಂಶೋಧನಾ ಪತ್ರಿಕೆಗಳಲ್ಲಿ, ಪ್ರಬಂಧ ಮಂಡಿಸಿ, ಋಜುವಾತು ಪಡಿಸಿದ್ದಾರೆ. ಪಶ್ಚಿಮಘಟ್ಟ, ಅಪೂರ್ವ ಸಸ್ಯ ತಳಿಗಳ ಆಗರವಾಗಿದೆ. ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂಶೋಧನೆ ಕುರಿತು ಮಾಹಿತಿ ನೀಡಿದ್ದಾರೆ, ಪ್ರೊಫೆಸರ್ ಕೆ.ಕೋಟ್ರೇಶ.

<><><>

ಕೆ.ಕೋಟ್ರೇಶ ಧ್ವನಿ 60 ಸೆಕೆಂದುಗಳು

<><><>

ಈಗ ವಾಣಿಜ್ಯ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(32 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_Kannada ಹಾಗೂ

ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.

<><><>

'ಜಿ.ಎಸ್.ಟಿ. ಬಚತ್ ಉತ್ಸವ್ ಕಾ ರಂಗ್, ದಿವಾಲಿ ಕೀ ರೌನಕ್ ಸಂಗ್', ಸರಕು ಮತ್ತು ಸೇವಾ ತೆರಿಗೆ, ಜಿ.ಎಸ್.ಟಿ. 2ನೇ ಆವೃತ್ತಿ ಪರಿಷ್ಕರಣೆಯಿಂದ, ದೇಶದ ಆರ್ಥಿಕತೆಗೆ, ಉತ್ತೇಜನ ದೊರೆತಿದೆ ಎಂದು, ಕೇಂದ್ರ ಹಣಕಾಸು ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್, ಹೇಳಿದ್ದಾರೆ. ಹೊಸ ದಿಲ್ಲಿಯಲ್ಲಿ ಮಾತನಾಡಿದ ಅವರು, ಜಿ.ಎಸ್.ಟಿ. ಕಡಿತದಿಂದ, 54 ವಸ್ತುಗಳ ಬೆಲೆ ಕಡಿಮೆಯಾಗಿದ್ದು, ಈ ಲಾಭ ನೇರವಾಗಿ ಗ್ರಾಹಕರಿಗೆ ತಲುಪಿದೆ, ಎಂದರು.

<><><>

ಕೇಂದ್ರ ವಾಣಿಜ್ಯ ಖಾತೆ ಸಚಿವ, ಪಿಯೂಷ್ ಗೋಯಲ್ ಮಾತನಾಡಿ, ಜಿ.ಎಸ್.ಟಿ. ಕರದ ಇಳಿಕೆ, ಜನ್ ಧನ್ ಯೋಜನೆ, ಸ್ವಚ್ಛ ಭಾರತ್ ಮಿಷನ್, ಡಿಜಿಟಲ್ ಇಂಡಿಯಾ, ಸ್ಟ್ಯಾಂಡ್ ಅಪ್ ಇಂಡಿಯಾ, ಮುದ್ರಾ, ಸ್ವ ನಿಧಿ ಯೋಜನೆ ಸೇರಿದಂತೆ, ಕಳೆದ 11 ವರ್ಷಗಳಲ್ಲಿ, ಸೇವೆ, ಸುಶಾಸನ ಹಾಗೂ ಜನಸಾಮಾನ್ಯರ ಕಲ್ಯಾಣಕ್ಕೆ, ಹಲವು ಯೋಜನೆಗಳನ್ನು, ಕೇಂದ್ರದ ಮೋದಿ ಸರ್ಕಾರ ಜಾರಿಗೊಳಿಸಿದೆ, ಎಂದರು.

<><><>

ಕೇಂದ್ರ ವಾರ್ತಾ ಹಾಗೂ ಪ್ರಸಾರ ಖಾತೆ ಸಚಿವ, ಅಶ್ವಿನಿ ವೈಷ್ಣವ್ ಮಾತನಾಡಿ, ಜಿ.ಎಸ್.ಟಿ ಕಡಿತದಿಂದ, ಖಾದ್ಯಗಳ ಬೆಲೆ ಗಣನೀಯವಾಗಿ ಇಳಿಕೆಯಾಗಿದ್ದು, ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ, ತುಂಬ ಅನುಕೂಲವಾಗಿದೆ. ಇಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿ, 25 ಲಕ್ಷ ಯುವಜನರಿಗೆ ಉದ್ಯೋಗ ದೊರೆತಿದೆ ಎಂದು ಹೇಳಿದರು.

<><><>

ಬೆಂಗಳೂರು–ಮುಂಬೈ, ಸೂಪರ್ ಫಾಸ್ಟ್ ರೈಲಿಗೆ,ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ, ರೇಲ್ವೆ ಖಾತೆ ಸಚಿವರನ್ನು ಅಭಿನಂದಿಸಿ, ನೂತನ ರೈಲು, ತುಮಕೂರು, ದಾವಣಗೆರೆ, ಹಾವೇರಿ, ಹುಬ್ಬಳ್ಳಿ–ಧಾರವಾಡ, ಬೆಳಗಾವಿ ಮಾರ್ಗದಲ್ಲಿ ಸಂಚರಿಸಲಿದೆ. ಶೀಘ್ರ ವೇಳಾಪಟ್ಟಿ ಪ್ರಕಟಗೊಳ್ಳಲಿದೆ, ಎಂದರು.

<><><>

'ನಮ್ಮ ನಡೆ, ಹಸಿರಿನೆಡೆಗೆ' ಅಭಿಯಾನದಡಿ, 'ಸ್ವಚ್ಛ ದೀಪಾವಳಿ, ಸ್ವಸ್ಥ ದೀಪಾವಳಿ' ಧ್ಯೇಯದೊಂದಿಗೆ, ಹಸಿರು ಪಟಾಕಿಗಳನ್ನು ಮಾತ್ರ ಬಳಸುವಂತೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕೊಡಗು ಜಿಲ್ಲೆ, ಪ್ರಧಾನ ಆಯುಕ್ತ, ಕೆ.ಟಿ. ಬೇಬಿ ಮ್ಯಾಥ್ಯು, ಮನವಿ ಮಾಡಿದ್ದಾರೆ. ಮಾಲಿನ್ಯ ನಿಯಂತ್ರಣ ಮಂಡಳಿಯ, ಕೊಡಗು ಪ್ರಾದೇಶಿಕ ಕಚೇರಿ ಆಯೋಜಿಸಿದ್ದ, 'ಗೋ ಗ್ರೀನ್ ಅಭಿಯಾನ'ಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ಕೊಡಗಿನಲ್ಲಿ ಕಳೆದ 15 ವರ್ಷಗಳಿಂದ, ಪರಿಸರ ಸ್ನೇಹಿ ಹಸಿರು ದೀಪಾವಳಿ ಆಚರಿಸಲಾಗುತ್ತಿದೆ, ಎಂದರು.

<><><>

ಕರ್ನಾಟಕ ಶಾಸ್ತ್ರೀಯ ಸಂಗೀತಜ್ಞೆ, ವಿದುಷಿ ಆರ್.ಎ. ರಮಾ ಮಣಿ, ನಿನ್ನೆ ಬೆಂಗಳೂರಿನಲ್ಲಿ ನಿಧನರಾದರು. ಅವರಿಗೆ 75 ವರ್ಷ ವಯಸ್ಸಾಗಿತ್ತು. ಬೆಂಗಳೂರಿನ ಖ್ಯಾತ ಮೃದಂಗ ವಿದ್ವಾನ್, ದಿವಂಗತ ಟಿ.ಎ.ಎಸ್. ಮಣಿ ಅವರ ಪತ್ನಿ ಹಾಗೂ ಘಟಂ ವಾದಕ, ಕಾರ್ತಿಕ್ ಮಣಿ ಅವರ ತಾಯಿ. ಪಾರ್ಥಿವ ಶರೀರದ ಅಂತ್ಯಕ್ರಿಯೆ, ಇಂದು ಬೆಳಗ್ಗೆ 11 ಗಂಟೆಗೆ, ಶ್ರೀರಾಮಪುರದ ಹರಿಶ್ಚಂದ್ರ ಘಾಟ್‌ನಲ್ಲಿ ನಡೆಯಲಿದೆ. ಗಣ್ಯರು ಹಾಗೂ ಸಂಗೀತ ಕ್ಷೇತ್ರದ ಮಹನೀಯರು, ಕಂಬನಿ ಮಿಡಿದಿದ್ದಾರೆ.

<><><>

ಕೊಪ್ಪಳ ಜಿಲ್ಲೆ, ಗಂಗಾವತಿ ತಾಲೂಕು, ಹಿರೇಬೆಣಕಲ್ ಪ್ರಾಗೈತಿಹಾಸಿಕ ನೆಲೆ ಕುರಿತಾದ, ಛಾಯಾಚಿತ್ರ ಪ್ರದರ್ಶನವನ್ನು, ಬೆಂಗಳೂರಿನ ಕಸ್ತೂರಬಾ ರಸ್ತೆಯ, ವೆಂಕಟಪ್ಪ ಚಿತ್ರಶಾಲೆಯಲ್ಲಿ ಆಯೋಜಿಸಲಾಗಿದೆ. ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಆಯೋಜಿಸಿದ ಛಾಯಾಚಿತ್ರ ಪ್ರದರ್ಶನಕ್ಕೆ ಭೇಟಿ ನೀಡುವಂತೆ, ಸರ್ಕಾರಿ ವಸ್ತು ಸಂಗ್ರಹಾಲಯಗಳು ಮತ್ತು ವೆಂಕಟಪ್ಪ ಚಿತ್ರಶಾಲೆಯ ಸಹಾಯಕ ನಿರ್ದೇಶಕರು, ಕೋರಿದ್ದಾರೆ.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು ಪಂಚಾಯಿತಿ, ಸಾಮರ್ಥ್ಯ ಸೌಧದಲ್ಲಿ, 'ನಶೆ ಮುಕ್ತ ಭಾರತ' ಅಭಿಯಾನದಡಿ, ರಂಗೋಲಿ ಸ್ಪರ್ಧೆ ಜರುಗಿತು. ಮೈತ್ರಿ ವ್ಯಸನ ಮುಕ್ತಿ ಪುನರ್ ವಸತಿ ಕೇಂದ್ರ ಆಯೋಜಿಸಿದ್ದ ಸ್ಪರ್ಧೆಗೆ, ವಿಕಲಚೇತನರ ಅಭಿವೃದ್ಧಿ ಅಧಿಕಾರಿ, ಸವಿತಾ ಕಾಳೆ ಚಾಲನೆ ನೀಡಿ, ಯುವ ಪೀಳಿಗೆ ಮದ್ಯ, ಮಾದಕ ವಸ್ತು ಹಾಗೂ ತಂಬಾಕು ಸೇವನೆ ಮಾಡದಂತೆ, ಮನವಿ ಮಾಡಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಆದಿ ಕರ್ಮಯೋಗಿ; ಧರ್ತಿ ಆಭಾ, ಗ್ರಾಮ ಉತ್ಕರ್ಷ ಅಭಿಯಾನ; ರಾಜ್ಯಕ್ಕೆ ಆರು ರಾಷ್ಟ್ರೀಯ ಪುರಸ್ಕಾರಗಳ, ಗರಿ.
- ಉತ್ತರ ಕರ್ನಾಟಕದ, ಸಕ್ಕರೆ ಕಾರ್ಖಾನೆಗಳಲ್ಲಿ, ಕಬ್ಬು ಅರೆಯುವ ಕಾರ್ಯಕ್ಕೆ, ನಾಳೆ ಚಾಲನೆ.
- ಗ್ರಾಮ ಪಂಚಾಯಿತಿಯಿಂದ, ಇ–ಸ್ವತ್ತು ವಿತರಣೆಗೆ, ಗ್ರಾಮೀಣಾಭಿವೃದ್ಧಿ ಇಲಾಖೆ, ಕ್ರಮ.
- 'ಜಿ.ಎಸ್.ಟಿ. ಬಚತ್ ಉತ್ಸವ್'; 2ನೇ ಆವೃತ್ತಿ ತೆರಿಗೆ ಪರಿಷ್ಕರಣೆ, ದೀಪಾವಳಿ ಮೆರಗು ಹೆಚ್ಚಿಸಿದೆ – ಕೇಂದ್ರ ಸರ್ಕಾರ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>